# ಶ್ರೀಮಾತೆಯವರ ಜೀವನದ ಕಷ್ಟಕಾರ್ಪಣ್ಯಗಳು

ಅನುರಾಧ ವಸಂತಕುಮಾರ್

ಮಾನವ ಜೀವನದಲ್ಲಿ ಕಷ್ಟ ಕಾರ್ಪಣ್ಯಗಳು ಬರುವುದು ಸಹಜ. ಶ್ರೀಮಾತೆಯವರಂಥ ಅವತಾರಿಗಳಿಗೂ ಇದು ತಪ್ಪಿದ್ದಲ್ಲ. ಶ್ರೀಮಾತೆಯವರು ಕೆಸರಿನಲ್ಲಿ ಇರುವ ಕಮಲದಂಥ ಜೀವನವನ್ನು ಬಾಳಿದರು. ಎಲ್ಲ ಕಷ್ಟಗಳನ್ನೂ ಬಹಳ ಉನ್ನತ ಮನೋಭಾವದಲ್ಲಿ ಸಹಿಸಿಕೊಂಡರು. ಈ ಅಂಶದ ಸ್ವಾರಸ್ಯಕರ ವಿವರಣೆಯನ್ನು ನೀಡಿರುವವರು ಬೆಂಗಳೂರಿನ ಶ್ರೀಶಾರದಾ ಮಠದ ಭಕ್ತರು.

ಸನಾತನ ಧರ್ಮದ ಪ್ರಕಾರ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ನಾಲ್ಕು ಆಶ್ರಮಗಳಿವೆ. ಅವುಗಳಲ್ಲಿ ಗೃಹಸ್ಥಾಶ್ರಮವೇ ಅತ್ಯಂತ ಮುಖ್ಯವಾದುದು. ಏಕೆಂದರೆ, ಉಳಿದೆಲ್ಲ ಆಶ್ರಮಗಳೂ ಗೃಹಸ್ಥಧರ್ಮದ ಅಡಿಪಾಯದ ಮೇಲೆಯೇ ನಿಂತಿದೆ ಎಂದು ಹೇಳಬಹುದು. ಅವತಾರವರಿಷ್ಠರಾದ ಶ್ರೀರಾಮಕೃಷ್ಣರು ಸರ್ವಸಂಗಪರಿತ್ಯಾಗಿಗಳು. ಆದರೂ, ಶ್ರೀಮಾತೆ ಶಾರದಾದೇವಿಯವರನ್ನು ಮದುವೆಯಾದರು. ಆ ಮೂಲಕ ಗೃಹಸ್ಥಧರ್ಮದ ಔನ್ನತ್ಯಕ್ಕೆ ದಾರಿದೀವಿಗೆಯಾದರು. ಈ ಮಾರ್ಗವನ್ನೇ ಶ್ರೀಮಾತೆಯವರೂ ಅನುಸರಿಸಿ ಆದರ್ಶ ಗೃಹಿಣಿಯಾದರು. ಸಾಮಾನ್ಯ ಗೃಹಿಣಿಯರಂತೆ ಎಲ್ಲ ರೀತಿಯ ಕಷ್ಟನಷ್ಟಗಳನ್ನೂ, ತಾಪತ್ರಯಗಳನ್ನೂ ಅನುಭವಿಸಿದರು.

ಇಲ್ಲಿ ಓದುಗರಿಗೆ ಸಹಜವಾದ ಒಂದು ಪ್ರಶ್ನೆ ಉದ್ಭವಿಸಬಹುದು. ಕುತೂಹಲ ಮತ್ತು ಆಶ್ಚರ್ಯ ಉಂಟಾಗಬಹುದು. ಅವತಾರಪುರುಷರನ್ನು ಕೈಹಿಡಿದ ಶ್ರೀಮಾತೆಯರಿಗೆ ಲೌಕಿಕ ಜೀವನಕ್ಕೆ ಸೀಮಿತವಾದ ಏರುಪೇರುಗಳು ಮತ್ತು ತಾಪತ್ರಯಗಳಿಗೆ ಭಾಗಿಯಾಗುವ ಆವಶ್ಯಕತೆಯಾದರೂ ಏನಿತ್ತು? ಹೌದು. ಈ ಪ್ರಶ್ನೆಯು ಬರುವಂಥದ್ದೇ. ಮಾನವಕುಲದಲ್ಲಿ ಹಿಂದೆ ಹುಟ್ಟಿದ, ಈಗ ಹುಟ್ಟಿರುವ ಮತ್ತು ಮುಂದೆ ಹುಟ್ಟಲಿರುವ ಪ್ರತಿಯೊಂದು ಜೀವಿಯೂ ತಾಪತ್ರಯಗಳ ದಾರಿಯನ್ನು ಹಾದುಹೋಗಲೇಬೇಕು; ಜಗದ ದುಃಖದಲ್ಲಿ ಭಾಗಿಯಾಗಲೇಬೇಕು. ಆದರೆ ಶ್ರೀಮಾತೆಯವರದು ಸಹನೆ, ತಾಳ್ಮೆ, ಸೌಜನ್ಯತೆ, ಪ್ರೀತಿ, ಗೌರವ ಮುಂತಾದ ದೈವೀಗುಣಗಳಿಂದ ಕೂಡಿದ ದಿವ್ಯ ವ್ಯಕ್ತಿತ್ವ. ಅವರು ಸಹಿಷ್ಣುತೆಯ ಸಾಕಾರಮೂರ್ತಿ; ಮಹಾತಪಸ್ವಿನಿ. ಯಾವ ತಾಪತ್ರಯಗಳಿಗೂ ಜಗ್ಗದೆ ಎಲ್ಲವನ್ನೂ ಸಾಕ್ಷಿಯಂತೆ ಕಂಡರು. ಎದುರಾದ ಕಷ್ಟನಷ್ಟಗಳನ್ನೆಲ್ಲವನ್ನೂ ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸಿದರು. ತಮಗಾಗಿ ಯಾರಿಂದಲೂ ಏನನ್ನೂ ನಿರೀಕ್ಷಿಸಲಿಲ್ಲ. ಜಗತ್ತಿನ ಕಾರ್ಯರಂಗಕ್ಕೆ ಹೆದರಲಿಲ್ಲ. ಎಲ್ಲವನ್ನೂ ಅವರು ಗಟ್ಟಿಮನಸ್ಸಿನಿಂದ ಎದುರಿಸಿದರು. ಯಾವ ಪ್ರತಿಕ್ರಿಯೆಯ ಭಾವವೂ ಇಲ್ಲದೆ, ಎಲ್ಲರನ್ನೂ ಮನದುಂಬಿ ಹರಸಿದರು. ಒಟ್ಟಿನಲ್ಲಿ ಹೇಳುವುದಾದರೆ, ಮೇಲಿನ ಪ್ರಶ್ನೆಗೆ ಶ್ರೀಮಾತೆಯವರ ಅನುಪಮ ವ್ಯಕ್ತಿತ್ವ ಮತ್ತು ಜೀವನಗಳೇ ಉತ್ತರವಾಗಿ ಪರಿಣಮಿಸಬಲ್ಲುದು.

ಭರತಖಂಡದಲ್ಲಿ ಸ್ತ್ರೀಯರ ಆತ್ಮವಿಶ್ವಾಸಕ್ಕೆ ಹಿಂದಿನಿಂದಲೂ ಹಲವಾರು ಅಡ್ಡಿ ಆತಂಕಗಳು ತಲೆದೋರುತ್ತಲೇ ಇವೆ. ಇಂಥ ಕಠಿಣ ಪರಿಸ್ಥಿತಿಯಲ್ಲಿಯೂ ಅನೇಕ ಸ್ತ್ರೀರತ್ನಗಳು ಇತಿಹಾಸದಲ್ಲಿ ಆಗಿಹೋಗಿದ್ದಾರೆ. ಸ್ವಾಮಿ ವಿವೇಕಾನಂದರ ಅಭಿಪ್ರಾಯದಂತೆ ಭಾರತೀಯ ನಾರಿಯರ ಆದರ್ಶ ಸೀತೆ. "ವಾಲ್ಮೀಕಿ ಚಿತ್ರಿಸಿರುವ ಸೀತಾಮಾತೆಯ ವ್ಯಕ್ತಿತ್ವ ಸಹಿಷ್ಣುತಾರೂಪಿಯದ್ದು. ಕಷ್ಟಸಹಿಷ್ಣುತೆಯೂ ಒಂದು ಬಗೆಯ ಸಾಮರ್ಥ್ಯ ಅಥವಾ ಶಕ್ತಿಯೇ ಆಗಿದೆ. ಈ ನೈತಿಕ ಶಕ್ತಿಯನ್ನು ನಮ್ಮ ನಾರಿಯರು



ಪುಟ್ಟ ಶಾರದೆ ಹುಲ್ಲು ಕೊಯ್ಯುವುದು

ತಮ್ಮ ನಿತ್ಯಜೀವನದಲ್ಲಿ ರೂಪಿಸಿಕೊಳ್ಳಬೇಕು" ಎಂದು ಸ್ವಾಮೀಜಿ ಹೇಳುತ್ತಿದ್ದರು. ಇದಲ್ಲದೆ ಸೋದರಿ ನಿವೇದಿತಾ, "ಭಾರತೀಯ ಸ್ತ್ರೀಯರ ಆದರ್ಶದ ವಿಷಯವಾಗಿ ಪರಮಹಂಸರು ಹೇಳಿರುವ ಕಟ್ಟಕಡೆಯ ಮಾತೇ ಶ್ರೀಶಾರದಾದೇವಿಯವರು" ಎಂದಿದ್ದಾರೆ.

'ತ್ರಯ' ಎಂದರೆ ಮೂರು ಎಂದರ್ಥ. 'ತಾಪ' ಎಂದರೆ ಸುಡುವ ಶಕ್ತಿ. ಶಾಸ್ತ್ರಗಳ ಪ್ರಕಾರ, 'ಆಧಿದೈವಿಕ', 'ಆಧಿಭೌತಿಕ' ಮತ್ತು 'ಆಧ್ಯಾತ್ಮಿಕ' ಎಂಬ ಮೂರು ಬಗೆಯ ತಾಪಗಳಿವೆ. ಮೊದಲನೆಯದು ದೈವ ಅಥವಾ ಅದೃಷ್ಟದಿಂದ ಉಂಟಾಗುವಂಥದ್ದು. ಎರಡನೆಯದು ಪ್ರಾಕೃತಿಕ ಶಕ್ತಿಗಳು ಮತ್ತು ಇತರೆ ಜೀವಿಗಳಿಂದ ಬರುವಂಥದ್ದು. ಮೂರನೆಯದು ನಮ್ಮ ದೇಹದ ಮುಖಾಂತರವೇ ನಮಗೆ ಉಂಟಾಗುವ ರೋಗರುಜಿನಗಳು. ಇವುಗಳಲ್ಲಿ ಒಂದಲ್ಲ ಒಂದು ತಾಪ ಮನುಷ್ಯರನ್ನು ಕಾಡುತ್ತಲೇ ಇರುತ್ತದೆ. ಮಾನವಜನ್ಮವನ್ನು ತಾಳಿದ ಶ್ರೀಮಾತೆಯವರು ಸಹ ಈ ತಾಪತ್ರಯಗಳ ಹಾದಿಯಲ್ಲಿಯೇ ತಮ್ಮ ಬಾಳಿನ ಪ್ರಯಾಣವನ್ನು ಮಾಡಬೇಕಾಗಿತ್ತು.

ಶ್ರೀಮಾತೆಯವರ ಜೀವನದಲ್ಲಿ ನಾವು ಯಾವ ರೀತಿಯ ಪವಾಡವನ್ನೂ ನೋಡುವುದಿಲ್ಲ. ಯಾವ ರೀತಿಯ ರೋಮಾಂಚಕಾರಿ ಘಟನೆಯೂ ಅವರ ಜೀವನದಲ್ಲಿ ಘಟಿಸಲಿಲ್ಲ. ತ್ಯಾಗ, ಪವಿತ್ರತೆ, ನಿಸ್ವಾರ್ಥಗಳ ಅಡಿಗಲ್ಲಿನ ಮೇಲೆ ಅವರ ಜೀವನಸೌಧ ನಿರ್ಮಾಣವಾಗಿತ್ತು. ಕೊಲ್ಕತಾ ನಗರಕ್ಕೆ ಅರುವತ್ತು ಮೈಲಿ ದೂರದ ಜಯರಾಂಬಾಟಿಯಲ್ಲಿ ಅವರು ಜನಿಸಿದರು. ಅವರ ತಾಯಿ ಶ್ಯಾಮಾಸುಂದರೀದೇವಿ. ತಂದೆ ರಾಮಚಂದ್ರ ಮುಖರ್ಜಿ. ಶ್ರೀಮಾತೆಯವರಿಗೆ ಒಬ್ಬಳು ತಂಗಿ ಮತ್ತು ಐವರು ತಮ್ಮಂದಿರಿದ್ದರು. ಈ ತಮ್ಮಂದಿರೇ ಶ್ರೀಮಾತೆಯವರು ಮುಂದೆ ಅನುಭವಿಸಬೇಕಾದ ಬಹುತೇಕ ಕಷ್ಟಗಳಿಗೆ ಕಾರಣರಾದರು.

**ಬಡತನದ ಬಾಲ್ಯ** : ಶ್ರೀಮಾತೆಯವರು ಹುಟ್ಟಿದ್ದು ಬಡತನದ ಕುಟುಂಬದಲ್ಲಿ. ಬಾಲ್ಯದಿಂದ ಅವರು ತಂದೆತಾಯಿಯರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಿದ್ದರು. ಬಂದ ಕಷ್ಟಗಳನ್ನು ತಮ್ಮ ಸೂಕ್ಷ್ಮ ಬುದ್ಧಿವಂತಿಕೆಯಿಂದ ಪರಿಹರಿಸಿಕೊಳ್ಳುತ್ತಿದ್ದರು. ನೆರೆಹೊರೆಯವರ ಪ್ರೀತಿಗೆ ಪಾತ್ರರಾಗಿದ್ದರು. ಹೆಚ್ಚು ಕೆಲಸವೆಂದು ಎಂದೂ ಅವರು ಗೊಣಗಾಡುತ್ತಿರಲಿಲ್ಲ. ಅವರ ಕಷ್ಟಸಹಿಷ್ಣುತೆಗೆ ಒಂದು ನಿದರ್ಶನವೆಂದರೆ, ಹಸುಗಳಿಗಾಗಿ ಹುಲ್ಲು ಕೊಯ್ಯಲು, ಪುಟ್ಟ ಶಾರದಾ ಮೊಣಕಾಲಿನಷ್ಟು ಆಳ ಇರುವ ನೀರಿನಲ್ಲಿ ನಡೆದು ಹೋಗಬೇಕಾಗಿತ್ತು. (*ಹಿಂದಿನ ಪುಟದ ಚಿತ್ರ ನೋಡಿ.*) ಇನ್ನು ಶ್ರೀಮಾತೆಯವರ ವಿವಾಹ ಆಗಿದ್ದು ಅವರಿಗೆ ಕೇವಲ ಐದು ವರ್ಷ ವಯಸ್ಸಾಗಿದ್ದಾಗ. ಪತಿ–ಪತ್ನಿ ಇಬ್ಬರದೂ ಬಡಕುಟುಂಬವೇ. ಹೀಗಾಗಿ ವಿವಾಹ ಆಡಂಬರವಿಲ್ಲದೆ ನಡೆಯಿತು.

**ಪತಿಯ ಮೇಲಿನ ಟೀಕೆ** : ಪತ್ನಿ ಶಾರದೆ ಜಯರಾಂಬಾಟಿಯಲ್ಲಿ ಇದ್ದರೆ, ಪತಿ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಸದಾಕಾಲವೂ ಗಾಢವಾದ ಸಾಧನೆಯಲ್ಲಿ ಮುಳುಗಿರುತ್ತಿದ್ದರು. ಧ್ಯಾನ ಸಮಾಧಿಗಳಲ್ಲಿ ತಲ್ಲೀನರಾಗಿರುತ್ತಿದ್ದರು. ಅನೇಕ ವೇಳೆ ಬಾಹ್ಯ ಪ್ರಜ್ಞೆ ಕೂಡ ಅವರಿಗೆ ಇರುತ್ತಿರಲಿಲ್ಲ. ಊರಿನ ಹೆಂಗಸರು ಶಾರದೆಯನ್ನು 'ಹುಚ್ಚನ ಹೆಂಡತಿ' ಎಂದು ಹೀಯಾಳಿಸುತ್ತಿದ್ದರು. ಗಂಡನ ಪ್ರೀತಿ ಇವಳಿಗೆ ಲಭ್ಯವಿಲ್ಲ ಎಂದು ಕಟಕಿಯಾಡುತ್ತಿದ್ದರು.




ಇದರಿಂದ ಶ್ರೀಮಾತೆಯವರು ಕೊಂಚವೂ ಧೃತಿಗೆಡಲಿಲ್ಲ. ಚೈತನ್ಯ ಪೂರ್ಣಿಮೆಯ ದಿನ ಗಂಗಾಸ್ನಾನ ಮಾಡುವ ನಿಮಿತ್ತ ಮಾಡಿಕೊಂಡು, ಕೆಲವು ಭಕ್ತರ ಜೊತೆಗೂಡಿ ದಕ್ಷಿಣೇಶ್ವರಕ್ಕೆ ಹೊರಟರು. ಅರುವತ್ತು ಮೈಲಿ ದೂರ ಅವರು ನಡೆಯಬೇಕಾಗಿತ್ತು. ಮಾರ್ಗಮಧ್ಯದಲ್ಲಿ ಜ್ವರದಿಂದ ನರಳಿದರು. ಕಾಳಿ ಭಗವತಿಯ ಸ್ಪರ್ಶದಿಂದ ಗುಣಮುಖರಾದರು. ಹೀಗೆ ಹಲವಾರು ಬಗೆಯ ಕಷ್ಟಗಳನ್ನು ಎದುರಿಸಿದರೂ, ಶ್ರೀಮಾತೆಯವರು ಹತಾಶರಾಗದೆ ದಕ್ಷಿಣೇಶ್ವರವನ್ನು ತಲುಪಿದರು.

**ದಕ್ಷಿಣೇಶ್ವರದ ಕಷ್ಟದ ಜೀವನ** : ಶ್ರೀರಾಮಕೃಷ್ಣರ ಕೊಠಡಿಯಿಂದ ೫೦ ಗಜ ದೂರದಲ್ಲಿ ಶ್ರೀಮಾತೆಯವರ ವಾಸಿಸುತ್ತಿದ್ದ ನಹಬತ್‌ಖಾನೆ ಇತ್ತು. ಅದರಲ್ಲಿ ಶ್ರೀಮಾತೆಯವರು ವಾಸಿಸುತ್ತಿದ್ದ ಸ್ಥಳ ಅತ್ಯಂತ ಕಡಮೆ ವಿಸ್ತೀರ್ಣದ್ದು. ಇಷ್ಟು ಕಿರಿದಾದ ಸ್ಥಳವೇ ಶ್ರೀಮಾತೆಯವರ ಅರಮನೆಯಾಗಿತ್ತು. ಅದೇ ಅವರ ಪೂಜಾಗೃಹ, ಅಡುಗೆ ಮನೆ, ಮಲಗುವ ಮನೆ, ಬಂದುಹೋಗುವವರಿಗೆ ಉಪಚರಿಸುವ ಕೊಠಡಿ – ಎಲ್ಲವೂ ಆಗಿತ್ತು. ಇಲ್ಲಿಯೇ ಅವರು ಬೆಳಗ್ಗೆ ಮೂರು ಗಂಟೆಯಿಂದ ಸತತವಾಗಿ ಕಾರ್ಯತತ್ಪರರಾಗಿರುತ್ತಿದ್ದರು. ಗಂಟೆಗಟ್ಟಲೆ ಜಪ ಧ್ಯಾನ, ಶ್ರೀರಾಮಕೃಷ್ಣರಿಗಾಗಿ ಪಥ್ಯದ ಆಹಾರ ತಯಾರಿಕೆ, ಬಂದ ಭಕ್ತರಿಗೆ ಅಡುಗೆ, ಮಹಿಳಾ ಭಕ್ತರಿಗೆ ಉಪಚಾರ – ಇವೆಲ್ಲವೂ ನಡೆಯುತ್ತಿತ್ತು. ಈ ಅಂಗಳದ ಸುತ್ತಲೂ ಒಂದು ಬೊಂಬಿನ ತಡೆಗೋಡೆಯಿತ್ತು. ಬಾಗಿಲು ಕಿರಿದಾಗಿತ್ತು, ಜಾಗರೂಕತೆಯಿಂದ ಇರದಿದ್ದರೆ ಹಣೆಗೆ ಡಿಕ್ಕಿ ಹೊಡೆಯುವಂತಿತ್ತು. ಶ್ರೀಮಾತೆಯವರಿಗೆ ಕೆಲವೊಮ್ಮೆ ಹಲವು ದಿನಗಳಾದರೂ ಶ್ರೀರಾಮಕೃಷ್ಣರ ದರ್ಶನ ಲಭಿಸುತ್ತಿರಲಿಲ್ಲ. ಏಕೆಂದರೆ, ಅವರಿಗೆ ಆಹಾರ ಕೊಡುವ ಕೈಂಕರ್ಯವನ್ನು ಬೇರೆ ಯಾರಾದರೂ ಭಕ್ತರು ಕೇಳಿ ಪಡೆದುಕೊಳ್ಳುತ್ತಿದ್ದರು. ಇದಲ್ಲದೆ, ಉಪ್ಪರಿಗೆ ಮೇಲೆ ವಾಸವಾಗಿದ್ದ ಶ್ರೀರಾಮಕೃಷ್ಣರ ತಾಯಿಯವರ ಸೇವೆಯನ್ನೂ ಮಾಡಬೇಕಾಗಿತ್ತು. ಈ ಎಲ್ಲ ಕಷ್ಟಗಳಿಗೂ ಶ್ರೀಮಾತೆ ಅಸಾಮಾನ್ಯ ನಿರ್ಲಿಪ್ತತೆಯಿಂದ ಒಗ್ಗಿಕೊಂಡಿದ್ದರು ಮಾತ್ರವಲ್ಲ,

ಅವರೇ ಮುಂದೊಮ್ಮೆ ಹೇಳುವಂತೆ, ತಮ್ಮ ಹೃದಯದಲ್ಲಿ ಆನಂದದ ಕೊಡವೇ ತುಂಬಿರುವಂತೆ ಭಾವಿಸುತ್ತಿದ್ದರು. ಶ್ರೀರಾಮಕೃಷ್ಣರ ಸೇವೆಯಲ್ಲಿ ಅವರು ದಿವ್ಯಾನಂದವನ್ನು ಅನುಭವಿಸುತ್ತಿದ್ದರು. ಹೊರಗಿನ ಯಾವುದೇ ಸಂಗತಿಗಳಿಗೆ ಸ್ವಲ್ಪವೂ ವಿಚಲಿತರಾಗದೆ, ಎಲ್ಲರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಮಾನವ ಜನ್ಮ ತಳೆದವರಿಗೆ ಮೃತ್ಯು ಅನಿವಾರ್ಯ. ಅವತಾರ ಪುರುಷರೂ ಇದಕ್ಕೆ ಹೊರತಲ್ಲ. ಶ್ರೀರಾಮಕೃಷ್ಣರು ತಮ್ಮ ದೇಹ ತ್ಯಾಗ ಮಾಡುವುದಕ್ಕೆ ಕೆಲವು ತಿಂಗಳ ಹಿಂದೆ, ಗಂಟಲಿನ ಕ್ಯಾನ್ಸರ್ ರೋಗಕ್ಕೆ ಗುರಿಯಾದರು. ಶ್ರೀಮಾತೆಯವರು, ತಾವು ಏಕಾಂಗಿಯಾಗಿದ್ದರೂ, ಮೊದಲು ಶ್ಯಾಮಪುಕುರದಲ್ಲಿನ ಮನೆ, ಅನಂತರ ಕಾಶಿಪುರದ ಉದ್ಯಾನವನದ ಮನೆ – ಈ ಎರಡು ಕಡೆಯೂ ತಮ್ಮನ್ನು ಸಂಪೂರ್ಣವಾಗಿ ಶ್ರೀರಾಮಕೃಷ್ಣರ ಸೇವೆಯಲ್ಲಿ ತೊಡಗಿಸಿಕೊಂಡರು. ಅಲ್ಲಿ ತಮಗೆ ಉಂಟಾಗಿದ್ದ ಎಲ್ಲ ಅನಾನುಕೂಲಗಳನ್ನೂ ಸಹಿಸಿಕೊಂಡು, ಶ್ರೀರಾಮಕೃಷ್ಣರಿಗಾಗಿ ಪಥ್ಯದ ಆಹಾರ ತಯಾರಿಸುತ್ತಿದ್ದರು. ಪತಿಯ ಆರೋಗ್ಯ ಸರಿಯಾಗಲೆಂದು, ತಾರಕೇಶ್ವರಕ್ಕೆ ಹೋಗಿ ವ್ರತವನ್ನು ಕೈಗೊಂಡು ಪರಶಿವನಿಗೆ ಪೂಜೆ ಸಲ್ಲಿಸಿದರು. ೧೮೮೬ರ ಆಗಸ್ಟ್ ೧೬ ರಂದು ಪರಮಹಂಸರ ದೇಹತ್ಯಾಗವಾಯಿತು.

**ವೈಧವ್ಯದ ನಿಂದನೆ :** ಯಾವುದೇ ಸಾಮಾನ್ಯ ಮಹಿಳೆಗಾದರೂ, ಅತಿ ದುಃಖವನ್ನು ಉಂಟುಮಾಡುವ ಮತ್ತು ಅಸಹನೀಯವಾದ ಸಂಗತಿಯೆಂದರೆ ಪತಿಯ ವಿಯೋಗ. ಅಂದಿನ ಸಮಾಜದ ಕಟ್ಟಲೆಯಂತೆ, ಕೆಂಪಂಚಿನ ಸೀರೆಯುಟ್ಟು ತಮ್ಮ ಬಳೆಗಳನ್ನು ಒಡೆದುಕೊಳ್ಳಲು ಶ್ರೀಮಾತೆಯವರು ಸಿದ್ಧರಾದಾಗ, ಶ್ರೀರಾಮಕೃಷ್ಣರೇ ಅವರಿಗೆ ದರ್ಶನವನ್ನು ನೀಡಿದರು. "ನಾನು ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಹೋಗುವಂತೆ, ಈ ದೇಹದ ಹೊರಗೆ ಹೋಗಿದ್ದೇನೆ" ಎಂದು ಸಾಂತ್ವನ ಹೇಳಿದರು. ಇದನ್ನು ಕೇಳಿ ಶ್ರೀಮಾತೆಯವರು ತಮ್ಮ ಮಂಗಳಸೂಚಕ ಚಿಹ್ನೆಗಳನ್ನು ಹಾಗೆಯೇ ಉಳಿಸಿಕೊಂಡರು. ಈ ಕುರಿತು ಕೆಲವು ಸಂಪ್ರದಾಯಸ್ಥರು ಟೀಕೆಯನ್ನೂ ಮಾಡಿದರು. ತಮ್ಮ ಅವಸಾನದ ನಂತರ, ಯಾರ ಮೇಲೆಯೂ ಅವಲಂಬಿತರಾಗದೆ ಕಾಮಾರಪುಕುರಕ್ಕೆ ಹೋಗಿರಬೇಕೆಂದು ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರು ಆಣತಿ ಇತ್ತಿದ್ದರು. ಅದನ್ನು ಶಿರಸಾಪಾಲಿಸಿದ ಶ್ರೀಮಾತೆಯವರು ಯಾರ ಹಂಗಿಗೂ ಒಳಗಾಗದೆ, ತಮ್ಮ ಬೃಂದಾವನ ಯಾತ್ರೆಯ ನಂತರ, ಕಾಮಾರಪುಕುರಕ್ಕೆ ಹೋಗಿ, ಅತ್ಯಂತ ಕಡುಬಡತನದ ಬಾಳನ್ನು ಬಾಳಿದರು. ಬಟ್ಟೆ ಹರಿದುಹೋಗುತ್ತಿದ್ದರೂ ಅದನ್ನೇ ಮತ್ತೆ ಮತ್ತೆ ತೇಪೆಹಾಕಿಕೊಂಡು ಉಟ್ಟುಕೊಳ್ಳುತ್ತಿದ್ದರು. ಇದ್ದ ತುಂಡು ಭೂಮಿಯಲ್ಲಿ ಏನು ಬೆಳೆಯುವುದೋ ಅದನ್ನೇ ಉಂಡು ಜೀವಿಸುತ್ತಿದ್ದರು. 'ಸೊಪ್ಪಿದ್ದರೆ ಉಪ್ಪಿಲ್ಲ, ಉಪ್ಪಿದ್ದರೆ ಸೊಪ್ಪಿಲ್ಲ' ಎಂಬ ದಾರಿದ್ರ್ಯದ ಸ್ಥಿತಿಯಲ್ಲಿ ಕರುಣಾಜನಕವಾದ ಬದುಕನ್ನು ಬಾಳಿದರು. ಇದಲ್ಲದೆ, ಹಳ್ಳಿಯ ಜನರ ನಿಂದೆ ಬೇರೆ. ಗ್ರಾಮದ ಜನರ ನಿಂದೆಯನ್ನು ಕೇಳಲಾಗದೆ, ಶ್ರೀಮಾತೆಯವರು ಒಮ್ಮೆ ತಮ್ಮ ಬಳೆಯನ್ನು ತೆಗೆದಿಟ್ಟರು. ಆಗ ಶ್ರೀರಾಮಕೃಷ್ಣರು ಕಾಣಿಸಿಕೊಂಡು, "ಗೌರ್‌ದಾಸಿ ನಿನಗೆ ಸಮಾಧಾನ ಹೇಳುತ್ತಾಳೆ" ಎಂದರು. ಅದೇ ರೀತಿ ಗೌರೀ ಮಾ ಬಂದು ಶ್ರೀಮಾತೆಯವರಿಗೆ, "ಸತಿಗೆ ಪತಿಯಾದವನು ಚಿನ್ಮಯಮೂರ್ತಿ. ಆತ್ಮ ಅಮರವಾದುದು. ನೀನು ವಿಧವೆಯಲ್ಲ, ಪ್ರೇಮಮೂರ್ತಿ" ಎಂದು ಸಾಂತ್ವನ ಹೇಳಿದಳು. ಇದರಿಂದ ಶ್ರೀಮಾತೆಯವರ ಮನಸ್ಸು ಸಂಪೂರ್ಣ ಸಮಾಧಾನ ಹೊಂದಿತು.

ಬಡತನ, ನಿಂದೆ, ವೈಧವ್ಯಗಳಿಂದ ಕೂಡಿದ ತಮ್ಮ ಕಷ್ಟಕಾರ್ಪಣ್ಯಗಳನ್ನು ಯಾರಿಗಾದರೂ ಹೇಳಿಕೊಳ್ಳೋಣವೆಂದರೆ, ಗ್ರಾಮದ ಜನರಾರೂ ಹತ್ತಿರ ಕೂಡ ಬರುತ್ತಿರಲಿಲ್ಲ. ಎಲ್ಲರಿಗೂ ಶ್ರೀಮಾತೆಯವರನ್ನು ಕಂಡರೆ ಒಂದು ಬಗೆಯ ಅಸಡ್ಡೆ. ಮನೆಯ ಕಣಜದಲ್ಲಿ ಸ್ವಲ್ಪ ಭತ್ತವಿತ್ತು. ಅದನ್ನೇ ಕುಟ್ಟಿ ಪುಡಿಮಾಡಿ, ಅಕ್ಕಿ ಮಾಡಿಕೊಂಡು, ಅನ್ನವಾಗಿ ಬೇಯಿಸಿಕೊಳ್ಳುತ್ತಿದ್ದರು. ಹರೀಶನೆಂಬ ಒಬ್ಬ ಹುಚ್ಚ ಒಮ್ಮೆ ಅವರನ್ನು ಬೆನ್ನಟ್ಟಿ ಬಂದ. ಆಗ ಲಜ್ಜಾಪಟಾವೃತೆಯಾದ ಶ್ರೀಮಾತೆಯವರು ಭಯಂಕರ ಕಾಳೀರೂಪವನ್ನು ತಾಳಿದರು. ಇಷ್ಟೆಲ್ಲ ಕಷ್ಟಗಳನ್ನು ಅನುಭವಿಸಿಯೂ, ಅದನ್ನು ಯಾರಿಗೂ ತಿಳಿಸದೆ, ಮೌನವಾಗಿ ದಿನಗಳನ್ನು ದೂಡಿದರು.

ಒಂದು ವರ್ಷ ಕಾಲ ಈ ಬಗೆಯ ಬಡತನ ಮತ್ತು ದುಃಖದ ಜೀವನವನ್ನು ಕಳೆದ ನಂತರ, ಶ್ರೀರಾಮಕೃಷ್ಣರ ಭಕ್ತರು ಶ್ರೀಮಾತೆಯವರನ್ನು ಕೊಲ್ಕತಾಗೆ ಕರೆತಂದರು. ಅಲ್ಲಿಂದ ಮುಂದೆ ಶ್ರೀಮಾತೆಯವರು ಕೆಲಕಾಲ ಕೊಲ್ಕತಾದಲ್ಲಿ ಮತ್ತು ಮತ್ತೆ ಕೆಲವು ಕಾಲ ಜಯರಾಂಬಾಟಿಯಲ್ಲಿ ಇರುತ್ತಿದ್ದರು.

**ವ್ಯಾಧಿಗಳ ಸರಣಿ:** ಪವಿತ್ರತಾಸ್ವರೂಪಿಣಿಯಾದ ಶ್ರೀಮಾತೆಯವರು ಅನೇಕ ದೈಹಿಕ ಬೇನೆಗಳಿಗೂ ತುತ್ತಾಗಬೇಕಾಯಿತು. ಶ್ರೀರಾಮಕೃಷ್ಣರು ಇರುವಾಗಲೇ, ಒಮ್ಮೆ ವಿಪರೀತ ಆಮಶಂಕೆಗೆ ತುತ್ತಾದರು. ದಕ್ಷಿಣೇಶ್ವರದಲ್ಲಿದ್ದರೆ, ಪತಿದೇವರಿಗೆ ತೊಂದರೆಯಾಗುತ್ತದೆಂದು, ಜಯರಾಂಬಾಟಿಗೆ ಹೋದರು. ಅಲ್ಲಿ ಅವರ ಸ್ಥಿತಿ ಇನ್ನೂ ವಿಕೋಪಕ್ಕೆ ಹೋಯಿತು. ಶರೀರ ಕೇವಲ ಮೂಳೆಗಳ ಚಕ್ಕಳವಾಗಿಬಿಟ್ಟಿತು. ಹಗಲೂ ರಾತ್ರೆ ಕೊಳದ ಹತ್ತಿರವೇ ಕಾಲಕಳೆಯಬೇಕಾಗಿತ್ತು. ಅಂಥ ಅವಸ್ಥೆಯಲ್ಲಿ, ಗ್ರಾಮದ ಅಧಿದೇವತೆ ಸಿಂಹವಾಹಿನಿಯನ್ನು ಪ್ರಾರ್ಥಿಸಿ ಗುಣಮುಖರಾದರು. ಹಾಗೆಯೇ ಕಾಲಾಂತರದಲ್ಲಿ ಹಳ್ಳಿಯ ಅನಾರೋಗ್ಯಕರ ವಾತಾವರಣದಲ್ಲಿ ಇದ್ದುದರಿಂದ ಅನೇಕ ಬಾರಿ ಮಲೇರಿಯಾ, ವಿಷಮಶೀತ ಮುಂತಾದ ಜ್ವರದ ಬಾಧೆಯಿಂದಲೂ ಶ್ರೀಮಾತೆಯವರು ನರಳಬೇಕಾಯಿತು. ಕೊಲ್ಕತಾದಲ್ಲಿ ಒಮ್ಮೆ ಸಿಡುಬು ಕೂಡ ಅವರನ್ನು ಬಾಧಿಸಿತು. ಹಾಗೆಯೇ ವೃದ್ಧಾಪ್ಯದಲ್ಲಿ ಕಾಲಿನ ಸಂಧಿವಾತ ಅವರನ್ನು ಕಾಡುತ್ತಿತ್ತು. ಅಂತ್ಯಕಾಲದಲ್ಲಿಯಂತೂ, ಅವರ ಇಡೀ ಶರೀರ ಜ್ವರದಿಂದ ಸುಡುತ್ತಿದ್ದು, ವಿಪರೀತ ಯಾತನೆಯನ್ನು ಅನುಭವಿಸುತ್ತ, ಚಿಕ್ಕ ಹುಡುಗಿಯ ಹಾಗೆ ವರ್ತಿಸುತ್ತಿದ್ದರು. ಆದರೆ ಈ ಎಲ್ಲ ದಾರುಣ ಕಷ್ಟಗಳನ್ನು ಸಮಚಿತ್ತದಿಂದ ಅನುಭವಿಸಿ, ಆದರ್ಶದ ಬಾಳನ್ನು ಬಾಳಿದರು.

**ತಮ್ಮಂದಿರ ತಂಟೆ:** ತಮ್ಮವರು ಎನಿಸಿಕೊಂಡ ಬೇರೆಲ್ಲರ ವಿಷಯದಲ್ಲಿ ಶ್ರೀಮಾತೆಯವರು ಭಾಗ್ಯವಂತರಾಗಿದ್ದರೂ, ತಮ್ಮ ತಮ್ಮಂದಿರ ವಿಷಯದಲ್ಲಿ ಅವರು ದುರದೃಷ್ಟಶಾಲಿಗಳೆಂದೇ ಹೇಳಬೇಕು. ಅವರ ತಮ್ಮಂದಿರು ತಮ್ಮ ಅಕ್ಕನ ದಿವ್ಯಭಾವವನ್ನು ಗುರುತಿಸಲು ವಿಫಲರಾಗಿದ್ದರು. ಭಕ್ತರು ನೀಡುತ್ತಿದ್ದ ಕೊಡುಗೆಗಳ ಮೇಲೆಯೇ ಅವರ ಕಣ್ಣು. ಹಣ ಮತ್ತಿತರ ಸಹಾಯಗಳಿಗಾಗಿ ಯಾವತ್ತೂ

ಶ್ರೀಮಾತೆಯವರನ್ನು ಕಾಡುತ್ತಿದ್ದರು. ಇದಲ್ಲದೆ ಆಸ್ತಿಗಾಗಿ ಪರಸ್ಪರ ಜಗಳವಾಡುತ್ತಿದ್ದರು. ತಮಗೆ ಸಾಕಷ್ಟು ಸಹಾಯ ಮಾಡಲಿಲ್ಲವೆಂದು ಶ್ರೀಮಾತೆಯವರನ್ನು ಅಡಿಗಡಿಗೂ ದೂರುತ್ತಿದ್ದರು. ಒಟ್ಟಿನಲ್ಲಿ ಇವರ ಸಲುವಾಗಿ ಶ್ರೀಮಾತೆಯವರು ಬಹಳ ಕಷ್ಟಗಳನ್ನು, ಮನೋವ್ಯಥೆಯನ್ನು ಅನುಭವಿಸಬೇಕಾಯಿತು. ತಮ್ಮಂದಿರಿಗೆ ಎಷ್ಟು ಮಾಡಿದರೂ, ಎಷ್ಟು ಕೊಡುಗೆಗಳನ್ನು ಕೊಟ್ಟರೂ ಅವರ ಬೇಡಿಕೆಗಳು ಬೆಳೆಯುತ್ತಲೇ ಹೋಗುತ್ತಿದ್ದವು. ಮಧ್ಯೆ ಮಧ್ಯೆ ಅವರ ನಡುವಣ ಜಗಳಗಳನ್ನು ಶ್ರೀಮಾತೆಯವರೇ ಬಿಡಿಸಬೇಕಾಗಿತ್ತು. ಹೀಗೆ ಸಂನ್ಯಾಸಿಯಂತೆ ಜೀವನ ಮಾಡಿದರೂ, ಸಂಸಾರದ ಕಾರ್ಪಣ್ಯ ಶ್ರೀಮಾತೆಯವರ ಬೆನ್ನುಬಿಡಲಿಲ್ಲ. ಕೆಸರಿನಲ್ಲಿ ಹುಟ್ಟಿದರೂ, ಅದಕ್ಕೆ ಸ್ವಲ್ಪವೂ ಅಂಟಿಕೊಳ್ಳದ ಕಮಲದಂತೆ, ಶ್ರೀಮಾತೆಯವರು ಈ ಎಲ್ಲ ಕೋಟಲೆಗಳ ನಡುವೆ ನಿಸ್ಸಂಗರಾಗಿ ಬಾಳಿದರು. ತಮ್ಮ ಸುತ್ತಲಿದ್ದ ಸಾಂಸಾರಿಕ ವಾತಾವರಣದಿಂದ ತಮ್ಮ ಮನಸ್ಸನ್ನು ಎತ್ತರಿಸಿಕೊಂಡು, ಭಗವನ್ಮಯ ಜೀವನವನ್ನು ನಡೆಸಿದರು.

**ಮನೆಯ ಹೆಂಗಸರ ಕಿರುಕುಳ :** ಮೊದಲನೆಯ ತಮ್ಮನ ಹೆಂಡತಿ ಕಾಲವಾದ ನಂತರ, ಆಕೆಯ ಮಕ್ಕಳಾದ ನಳಿನಿ ಮತ್ತು ಮಾಕುವಿನ ರಕ್ಷಣೆಯ ಭಾರವನ್ನು ಶ್ರೀಮಾತೆಯವರೇ ಹೊತ್ತುಕೊಂಡರು. ಕಿರಿಯ ತಮ್ಮನಾದ ಅಭಯನೂ ಮರಣಹೊಂದಿದ. ಹೀಗಾಗಿ ಆತನ ಪತ್ನಿ ಸುರಬಾಲೆ ಮತ್ತು ಮಗಳು ರಾಧುವಿನ ಜವಾಬ್ದಾರಿಯನ್ನೂ ಶ್ರೀಮಾತೆಯವರೇ ಹೊತ್ತುಕೊಳ್ಳಬೇಕಾಯಿತು. ಸುರಬಾಲೆ ಪತಿಯ ಮರಣದಿಂದ ಕಂಗೆಟ್ಟು ಹುಚ್ಚಿಯ ರೀತಿ ವರ್ತಿಸುತ್ತಿದ್ದಳು. ಆಕೆಯ ಮಗಳಾದ ರಾಧುವೂ ಬೆಳೆದಂತೆಲ್ಲ ಹುಚ್ಚಿಯಂತೆಯೇ ಆಡಲಾರಂಭಿಸಿದಳು. ಇವರಿಬ್ಬರ ಕಿರುಕುಳ ಶ್ರೀಮಾತೆಯವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು.



ರಾಧುವಿನ ಹುಚ್ಚುಕೋಪ

ಕಾಲಕ್ರಮೇಣ ರಾಧುವಿಗೆ ಮದುವೆಯಾಯಿತು. ಆದರೂ ಗಂಡನ ಮನೆಯಲ್ಲಿ ಇರಲಾರದೆ, ಶ್ರೀಮಾತೆಯವರಲ್ಲಿಯೇ ಆಶ್ರಯ ಪಡೆದಳು. ವಯಸ್ಸಾದಂತೆಲ್ಲ ಹುಚ್ಚು ಜಾಸ್ತಿಯಾಗುತ್ತಲೇ ಇತ್ತು. ಇದರಿಂದಾಗಿ ಶ್ರೀಮಾತೆಯವರು ಬಹಳಷ್ಟು ಮುಜುಗರವನ್ನು ಅನುಭವಿಸಬೇಕಾಯಿತು.

ರಾಧೆ ಕಾಲಕ್ರಮೇಣ ಒಂದು ಮಗುವಿಗೆ ತಾಯಿಯೂ ಆದಳು. ಆದರೆ ಜಗಳವಾಡುವ ಪ್ರವೃತ್ತಿಯನ್ನು ಬಿಡಲಿಲ್ಲ. ಒಂದು ದಿನ ಶ್ರೀಮಾತೆಯವರ ಮೇಲೆ ಕೋಪಗೊಂಡು, ಕೈಗೆ ಸಿಕ್ಕಿದ ಬದನೆಕಾಯಿಯಿಂದ ಅವರನ್ನು ಹೊಡೆದಳು. ಶ್ರೀಮಾತೆಯವರು ಒಡನೆ ಆಕೆಯನ್ನು ಕುರಿತು ಶ್ರೀರಾಮಕೃಷ್ಣರಲ್ಲಿ ಪ್ರಾರ್ಥಿಸಿದರು. ರಾಧುವಿನ ಉಪಟಳದಿಂದ ಕೆಲವೊಮ್ಮೆ ಬೇಸತ್ತು, "ಬಹುಶಃ ಮುಳ್ಳಿರುವ ಬಿಲ್ವಪತ್ರೆಯಿಂದ ನಾನು ಶಿವನನ್ನು ಪೂಜಿಸಿದ್ದಿರಬೇಕು" ಎಂದು ತಮಗೆ ತಾವೇ ಅಂದುಕೊಳ್ಳುತ್ತಿದ್ದರು.

**ಕಡೆಗಾಲದ ನಿರ್ಲಿಪ್ತತೆ :** ಶ್ರೀಮಾತೆಯವರು ತಾವು ಇಹ ಲೋಕದಲ್ಲಿ ಇರುವುದಕ್ಕೋಸ್ಕರವಾಗಿ ಮನಸ್ಸನ್ನು ಕೆಳಕ್ಕೆ ಇಳಿಸಿ ಕೊಂಡಿರುವುದಕ್ಕೆ, ರಾಧೆಯ ಮೇಲಿನ ತಮ್ಮ ನಂಟನ್ನು ನಿಮಿತ್ತ ವನ್ನಾಗಿ ಮಾಡಿಕೊಂಡಿದ್ದರು. ಲೋಕಕಲ್ಯಾಣಕ್ಕಾಗಿ, 'ರಾಧೆ' ಎಂಬ ಮಾಯೆಯಿಂದ ತಮ್ಮನ್ನು ತಾವು ಆವರಿಸಿಕೊಂಡಿದ್ದರು. ಆದರೆ ತಮ್ಮ ಕಡೆಯ ಕಾಲದಲ್ಲಿ ಎಲ್ಲ ರೀತಿಯ ಬಂಧನಗಳನ್ನೂ ತ್ಯಜಿಸಿಬಿಟ್ಟರು. ರಾಧೆಯನ್ನೂ, ಆಕೆಯ ಮಗುವನ್ನೂ ಜಯರಾಂಬಾಟಿಗೆ ಕಳಿಸಿ ಬಿಟ್ಟರು. ಆಕೆಯ ಮುಖವನ್ನು ನೋಡಲೂ ಇಷ್ಟಪಡುತ್ತಿರಲಿಲ್ಲ. ತಮ್ಮೆಲ್ಲ ನಂಟರನ್ನೂ ದೂರಮಾಡಿಬಿಟ್ಟರು.

**ಕಷ್ಟಸಹಿಷ್ಣುತೆಯ ಮಹತ್ವ:** ಶ್ರೀಮಾತೆಯವರ ಜೀವನ, ಕಷ್ಟ ಕಾರ್ಪಣ್ಯಗಳ ಅಲ್ಲೋಲಕಲ್ಲೋಲವಾದ ಸಮುದ್ರದಲ್ಲಿ ಪ್ರಯಾಣ ಮಾಡಿದಂತಹ ಜೀವನ. ಅವುಗಳಲ್ಲಿಯೇ ತೇಲುತ್ತ ಕಡೆಗೆ ಜೀವನದ ಸಂಧ್ಯೆಯನ್ನು ಅವರು ಮುಟ್ಟಿದರು. ತಾವೇ ಹೇಳಿಕೊಳ್ಳುವಂತೆ, ಒಂದು ಜೀವನವು ಆದರ್ಶಪ್ರಾಯವಾಗುವುದಕ್ಕೆ ಏನು ಬೇಕೋ, ಅದಕ್ಕಿಂತ ಹೆಚ್ಚಿನದನ್ನೇ ಬಾಳಿನಲ್ಲಿ ಸಾಧಿಸಿ, ೧೯೨೦ರ ಜುಲೈ ೨೦ನೇ ತಾರೀಖು ಶ್ರೀರಾಮಕೃಷ್ಣರಲ್ಲಿ ಐಕ್ಯರಾದರು.

ತಮ್ಮ ಕಷ್ಟಗಳ ವಿಷಯವಾಗಿ ಶ್ರೀಮಾತೆಯವರು ಸ್ವತಃ ತಾವೇ ಹೀಗೆ ಹೇಳಿಕೊಂಡಿದ್ದಾರೆ: "ನಾನು ಸಾಧಾರಣ ಹೆಂಗಸಲ್ಲವೆಂದು ಸುರಬಾಲಾ ಮತ್ತು ರಾಧುವಿಗೆ ಹೇಗೆ ತಾನೇ ಗೊತ್ತಾಗಬೇಕು? ನನ್ನ ಕಷ್ಟ, ತಾಪತ್ರಯ – ಇವೆಲ್ಲ ಸಹಜವಾದುದು. ಲೋಕಕಲ್ಯಾಣ ಕ್ಕಾಗಿಯೇ ನಾನು ಬಂದಿರುವುದು." ತಾವು ಅನುಭವಿಸಿದ ಎಲ್ಲ ಕಷ್ಟಗಳ ನಡುವೆಯೂ ಅವರು ತಮ್ಮ ಅವತರಣದ ಉದ್ದೇಶವನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಬಾಳಿದರು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಕಷ್ಟನಷ್ಟಗಳು ಉಂಟಾಗುವುದು ಅತ್ಯಂತ ಸಹಜವಾದುದು. ಅವುಗಳ ನಡುವೆಯೂ, ಭಗವಂತನಿಗೆ ಅರ್ಪಿತವಾದ ನಿಷ್ಕಳಂಕ, ನಿರ್ಲಿಪ್ತ ಜೀವನವನ್ನು ಬಾಳುವ ಬಗೆಯನ್ನು ಶ್ರೀಮಾತೆಯವರು ನಮಗೆಲ್ಲ ಹೇಳಿಕೊಡುತ್ತಾರೆ. ಅದಕ್ಕಾಗಿ ಶ್ರೀಮಾತೆಯವರ ಕೃಪೆ ಅತ್ಯವಶ್ಯಕ. ಬನ್ನಿ, ಶ್ರೀಮಾತೆಯವರ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ. ಅವರ ದಿವ್ಯವ್ಯಕ್ತಿತ್ವವನ್ನು ನೆನೆದು ಪುನೀತರಾಗೋಣ. *